





ದಿನಾಂಕ: 22-07-23 ರಂದು ನಾಡಿನ ಖ್ಯಾತಪತ್ರಕರ್ತರು, ವಿಮರ್ಶಕರು, ಹಿರಿಯ ಲೇಖಕರು ಹಾಗೂ ವಿಶ್ವವಾಣಿ ಪತ್ರಿಕೆಯ ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್ ಅವರ ನೇತೃತ್ವದ ವಿಶ್ವವಾಣಿ ಪುಸ್ತಕದ ಆರು ಕೃತಿಗಳು ಲೋಕಾರ್ಪಣೆಗೊಂಡವು. ಆರು ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್ ಹೊರಟ್ಟಿ ಅವರನ್ನು ವಿಶ್ವವಾಣಿ ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್ ಅವರು ತಮ್ಮ ಹಾಗೂ ಹೊರಟ್ಟಿ ಅವರೊಂದಿಗಿನ ಸುಧೀರ್ಘ ಆತ್ಮೀಯ ಒಡನಾಟದ ಕುರಿತು ಮಾತನಾಡಿ ಅತ್ಯಂತ ಗೌರವದಿಂದ ಪ್ರೀತಿಯಿಂದ ಮಾತನಾಡಿಸುವ ಅವರ ಗುಣ ವಿಶೇಷದ್ದು ಅವರ ನಾಲ್ಕು ದಶಕಗಳ ಹೋರಾಟ, ಅವರ ಹೆಜ್ಜೆ ಗುರುತುಗಳು ಅವರ ಮಾಡಿದ ಸಾಧನೆ ಕುರಿತು ಮಾತನಾಡುತ್ತವೆ. ಯಾವೊಂದು ಕಳಂಕವನ್ನು ಮೈಗೆ ಅಂಟಿಕೊಳ್ಳದೆ ಇರುವ ನಾಡಿನ ಏಕೈಕ ಜನಪ್ರತಿನಿಧಿ. ರಾಜಕಾರಣಿಗಳಲ್ಲಿ ಇವರೊಬ್ಬ ಅಪರೂಪದ ವ್ಯಕ್ತಿ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿ, ಶಾಸಕ ಪ್ರದೀಪ್ ಈಶ್ವರ್ ಸೇರಿದಂತೆ ಹಲವಾರು ಗಣ್ಯರು ಖ್ಯಾತ ಪತ್ರಕರ್ತರು, ವಿಮರ್ಶಕರು ಹಾಗೂ ಲೇಖಕರು ಉಪಸ್ಥಿತರಿದ್ದರು.